**English to Kannda translated verion**
**ಇಂಗ್ಲೀಷ್‌ನಿಂದ ಕನ್ನಡಕ್ಕೆ ಭಾಷಾಂತರಿಸಿದ ಪ್ರತಿ**

ತುಮಕೂರು ರಾಯದುರ್ಗ ಹೊಸ ರೈಲು ಹಳಿ ಜೋಡಣೆಗೆ ಸಂಬಂಧಿಸಿದಂತೆ ಸಾಮಾಜಿಕ ಪರಿಣಾಮ ನಿರ್ಧರಣೆ ವರದಿಯ ತಜ್ಞರ ತಂಡದ 3/3/2017 ಮತ್ತು 6/3/2017 ರ (ಸರಕಾರದಿಂದ ನೇಮಿಸಲಾದ ಕರ್ನಾಟಕ ಸರಕಾರ ಅದೇಶ ಸಂಖ್ಯೆ ಆರ್.ಡಿ.109 ಆರ್ ಇ. ಎಚ್. 2016 ಬೆಂಗಳೂರು ದಿನಾಂಕ 07.01.2017) ನಡವಳಿಕೆಗಳು.

**ಹಾಜರಿದ್ದ ತಜ್ಞರ ತಂಡದ ಸದಸ್ಯರು**

1) ಶ್ರೀ ರಾಘವೇಶ್ ಬದಾಮಿ, ಸಾಮಾಜಿಕ ತಜ್ಞರು, ಬೆಂಗಳೂರು.
2) ಶ್ರೀ ರಮೇಶ್ ರಾಮರಾವ್, ವ್ಯವಸ್ಥಾಪಕರು, ಪುರನ್‌ವಸತಿ ಪುನರ್‌ನಿರ್ಮಾಣ, ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ನಿಗಮ, ಬೆಂಗಳೂರು.
3) ಶ್ರೀ ಕಾಂತರಾಜು, ಸರಕಾರದ ಅಧೀನ ಕಾರ್ಯದರ್ಶಿ–2 ಕಂದಾಯ ಇಲಾಖೆ, ಕರ್ನಾಟಕ ಸರಕಾರ.
4) ಶ್ರೀ ವೆಂಕಟಸ್ವಾಮಿ, ಅಧ್ಯಕ್ಷರು, ಕಾಮನದುರ್ಗ (ನೀಲಿಹಳ್ಳಿ) ಪಂಚಾಯತಿ, ಪಾವಗಡ ತಾಲ್ಲೂಕು.
5) ಶ್ರೀ ಬಿ. ಆರ್. ತಿಪ್ಪೇಸ್ವಾಮಿ, ಅಧ್ಯಕ್ಷರು, ರೊಪ್ಪ ಗ್ರಾಮ ಪಂಚಾಯತಿ, ಪಾವಗಡ ತಾಲ್ಲೂಕು.

**ಗೈರು ಹಾಜರಿದ್ದ ಸದಸ್ಯರು:**

1. ರಿಜಿಸ್ಟ್ರಾರ್, ಐ.ಎಸ್.ಇ.ಸಿ., ಬೆಂಗಳೂರು

ತುಮಕೂರು ರಾಯದುರ್ಗ ರೈಲು ಯೋಜನೆಗೆ ಸಂಬಂಧಿಸಿದಂತೆ ಪಾವಗಡ ತಾಲ್ಲೂಕಿಗೆ ಸಂಬಂಧಿಸಿದಂತೆ (35 ಕಿ.ಮಿ.) ಜಿಲ್ಲಾಧಿಕಾರಿಗಳು ತುಮಕೂರು ಜಿಲ್ಲೆ, ತುಮಕೂರು ಇವರ ಮೂಲಕ ಲಭ್ಯವಾಗಿರುವ ಸಾಮಾಜಿಕ ಪರಿಣಾಮ ನಿರ್ಧರಣೆ ವರದಿಯನ್ನು ಪರಿಶೀಲಿಸಲಾಗಿ ಈ ಕೆಳಗಿನ ಶಿಫಾರಸ್ಸುಗಳನ್ನು ಮಾಡಲಾಗಿದೆ.

ಶಿಫಾರಸ್ಸುಗಳು :

1) ವರದಿಯನ್ನು ತಜ್ಞರ ತಂಡವು ಪರಿಶೀಲಿಸಲಾಗಿ ಪ್ರಸ್ತುತ ಯೋಜನೆಯು ಸಾರಿಗೆ ಸಂಪರ್ಕದ ಯೋಜನೆಯಾಗಿದ್ದು, ಕೇಂದ್ರ ಸರಕಾರದ ಹೊಸ ಭೂ ಸ್ವಾಧೀನ ಕಾಯ್ದೆ "ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ–2013"ರ ಕಲಂ 2(1)(ಬಿ) ರಂತೆ ಸಾರ್ವಜನಿಕ ಉದ್ದೇಶಕ್ಕಾಗಿರುತ್ತದೆ.
2) ಈ ಯೋಜನೆಯು Linear ಯೋಜನೆಯಾಗಿರುವುದರಿಂದ ಯಾವುದೇ ಹೆಚ್ಚು ಸಾಮಾಜಿಕ ಪರಿಣಾಮಗಳು ಇಲ್ಲವಾದರೂ ಯೋಜನೆಯಿಂದಾಗುವ ಪ್ರಯೋಜನೆಗಳನ್ನು ಪರಿಗಣಿಸಿದರೆ ಯೋಜನಾ ಕ್ಷೇತ್ರದ ಅಭಿವೃದ್ಧಿ ಚಾಲನೆಯ ಸಾಧ್ಯತೆ ಇದೆ.
3) ವರದಿಯ ಪ್ರಕಾರ 743 ಕುಟುಂಬಗಳಲ್ಲಿ ಯಾವುದೇ ಬುಡಕಟ್ಟು ಜನಾಂಗ ವಾಸವಾಗಿರುವುದಿಲ್ಲ ಮತ್ತು ಯೋಜನಾ ಬಾಧಿತ ಕುಟುಂಬಗಳನ್ನು ಕಾಯ್ದೆಯ ಅನುಸಾರ ಮಿತಗೊಳಿಸಿ ಉಪಶಮನಕ್ಕೆ ಪರಿಹಾರ ಕಲ್ಪಿಸಲಾಗಿದೆ.
4) Linear ಯೋಜನೆಯಾದ ರೈಲು ಯೋಜನೆಯು ಕೇಂದ್ರದ ಹೊಸ ಭೂ ಸ್ವಾಧೀನ ಕಾಯ್ದೆ "ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು

English to Kannda translated verion
ಇಂಗ್ಲಿಷ್‌ನಿಂದ ಕನ್ನಡಕ್ಕೆ ಭಾಷಾಂತರಿಸಿದ ಪ್ರತಿ

ಪುನರ್‌ನಿರ್ಮಾಣ ಕಾಯ್ದೆ-2013"ರ ಅಧ್ಯಾಯ 3 ಕಲಂ 10 (4) ರಂತೆ ಅಹಾರ ಭದ್ರತೆಯ ಕಾಯ್ದೆಯು ಅನ್ವಯವಾಗುವುದಿಲ್ಲ.

5) ಜಂಟಿ ಮೋಜಣೆ ಅಧಾರದ ಮೇಲೆ ಸ್ವಾಧೀನವಾಗುತ್ತಿರುವ ಭೂಮಿಗೆ ಹಾಗೂ ಅದಕ್ಕೆ ಹೊಂದಿಕೊಂಡಿರುವ ಕಟ್ಟಡಗಳಿಗೆ ಹೊಸ ಭೂ ಸ್ವಾಧೀನ ಕಾಯ್ದೆ "ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ-2013" ಆಧಾರದ ಮೇಲೆ ಪರಿಹಾರವನ್ನು ಪಾವತಿಸಬೇಕಾಗುವುದು.
6) ವರದಿಯನ್ನು ಜಿಲ್ಲಾಧಿಕಾರಿಗಳ ಮೂಲಕ ಆಯುಕ್ತರು, ಪುರನ್‌ವಸತಿ ಪುನರ್ ನಿರ್ಮಾಣ, ಕರ್ನಾಟಕ ಸರಕಾರ, ಬೆಂಗಳೂರು ಇವರಿಗೆ ಅನುಮೋದನೆಗಾಗಿ ಸಲ್ಲಿಸುವುದು.
7) ಅಂತಿಮ ವರದಿ, ವಿಡಿಯೋ ಹಾಗೂ ಸಮೀಕ್ಷೆಯ ವೇಳೆಯಲ್ಲಿ ಕಲೆಹಾಕಲಾದ ದಾಖಲೆಗಳು ಭೂ ಸ್ವಾಧೀನ ಇಲಾಖೆಯ ಸ್ವತ್ತುಗಳಾಗಿರುತ್ತವೆ.
8) ಸಾಮಾಜಿಕ ಪರಿಣಾಮ ನಿರ್ಧರಣೆಯ ಸಮಾಲೋಚಕರು ಗ್ರಾಮ ಪಂಚಾಯತಿಗೆ ಹಾಗೂ ವೆಬ್‌ಸೈಟಿನಲ್ಲಿ ಅಪ್ಲೋಡ್ ಮಾಡಲು ಸಾಕಷ್ಟು ಪ್ರತಿಗಳನ್ನು ಲಭ್ಯವಿರುವಂತೆ ನೋಡಿಕೊಳ್ಳುವುದು.

ಕಾರಣ, ಅಂತಿಮ ವರದಿಯನ್ನು ಸೂಕ್ತ ಕ್ರಮಕ್ಕಾಗಿ ಜಿಲ್ಲಾಧಿಕಾರಿಗಳು ಇವರಿಗೆ ಸಲ್ಲಿಸಲಾಗಿದೆ.

ಸಹಿ/-
ಡಾ. ರಾಘವೇಶ್ ಬದಾಮಿ
ಸಾಮಾಜಿಕ ತಜ್ಞರು,
ಬೆಂಗಳೂರು.

ಸಹಿ/-
ಶ್ರೀ ರಮೇಶ್ ರಾಮರಾವ್,
ವ್ಯವಸ್ಥಾಪಕರು, ಪುರನ್‌ವಸತಿ ಪುನರ್‌ನಿರ್ಮಾಣ,
ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ನಿಗಮ,
ಬೆಂಗಳೂರು.

ಸಹಿ/-
ಶ್ರೀ ಕಾಂತರಾಜು,
ಸರಕಾರದ ಅಧೀನ ಕಾರ್ಯದರ್ಶಿ-2
ಕಂದಾಯ ಇಲಾಖೆ,
ಕರ್ನಾಟಕ ಸರಕಾರ.

ಸಹಿ/-
ಶ್ರೀ ವೆಂಕಟಸ್ವಾಮಿ,
ಅಧ್ಯಕ್ಷರು,
ಕಾಮನದುರ್ಗ (ನೀಲಿಹಳ್ಳಿ) ಪಂಚಾಯತಿ,
ಪಾವಗಡ ತಾಲ್ಲೂಕು.

ಸಹಿ/-
ಶ್ರೀ ಬಿ. ಆರ್. ತಿಪ್ಪೇಸ್ವಾಮಿ,
ಅಧ್ಯಕ್ಷರು, ರೊಪ್ಪ ಗ್ರಾಮ ಪಂಚಾಯತಿ,
ಪಾವಗಡ ತಾಲ್ಲೂಕು.

ಸಹಿ/-
ವಿ. ಗೋಪಾಲರೆಡ್ಡಿ
ಅಧ್ಯಕ್ಷರು, ತಜ್ಞರ ತಂಡ
ತುಮಕೂರು – ರಾಯದುರ್ಗ ರೈಲ್ವೆ ಯೋಜನೆ